## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1104
2. ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 25.07.2024
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕರ್ನಾಟಕ ಸರ್ಕಾರ 1987 ರಿಂದ 1994ರವರೆಗೆ ಶೈಕ್ಷಣಿಕ ಸಾಲಿನ ಒಳಗೆ ಪ್ರಾರಂಭವಾಗಿರುವ 118 ಶಾಲೆಗಳಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ, ಅನುಮೋದನೆ ನೀಡಲಾಗಿದ್ದರೂ, ಆರ್ಥಿಕ ಇಲಾಖೆಯಲ್ಲಿ ಇನ್ನೂ 7 ಶಾಲೆಗಳಿಗೆ ವೇತನ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಡಿ.ಎಂ.ಸಿ. 2006, ದಿ: 06.10.2007ರಲ್ಲಿ ದಿನಾಂಕ:01.06.1987 ರಿಂದ 1994-95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭವಾಗಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಯುತ್ತಿರುವ ಶಾಲಾ/ಕಾಲೇಜುಗಳನ್ನು ಸದರಿ ಆದೇಶದಲ್ಲಿನ ಷರತ್ತುಗಳ ಪೂರೈಕೆಗಳಿಗೊಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸಲಾಗಿರುತ್ತದೆ.<br><br>ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಪ್ರಕರಣ 41 (5) ಹಾಗೂ Karnataka Educational Institutions (Change in the Governing Council or Change in the location of Private Educational Institutions) Rules, 2006ರ ಉಪಬಂಧಗಳ ನ್ವಯ ಶಾಲೆಗಳ ಸ್ಥಳ ಬದಲಾವಣೆ ಅಥವಾ ಆಡಳಿತ ಮಂಡಳಿಗಳ ಹಸ್ತಾಂತರವಾದಲ್ಲಿ, ಅಂತಹ ಶಾಲೆಗಳು, ಸ್ಥಳಾಂತರ-ಹಸ್ತಾಂತರಗೊಂಡ ದಿನಾಂಕದಿಂದ ಹೊಸದಾಗಿ ಪ್ರಾರಂಭವಾದ ಶಾಲೆಗಳೆಂದು ಪರಿಗಣಿಸಲ್ಪಡುತ್ತವೆ.<br><br>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 55648/2016 ಮತ್ತು 58296-58304 /2016 ದಿ:25.04.2017ರಂದು ನೀಡಿರುವ ತೀರ್ಪಿನಲ್ಲಿ 2006ರ ನಿಯಮಗಳ ಸಿಂಧುತ್ವವನ್ನು ಎತ್ತಿ ಹಿಡಿದಿರುವ ಹಿನ್ನೆಲೆಯಲ್ಲಿ, ಸುತ್ತೋಲೆ ಸಂಖ್ಯೆ:ಇಡಿ 127 ಎಸ್.ಇ. ಡಬ್ಲ್ಯೂ 2017, ದಿನಾಂಕ:29.06.2017 ರಲ್ಲಿ ಸ್ಥಳಾಂತರ-ಹಸ್ತಾಂತರಗೊಂಡ ಶಾಲೆಗಳನ್ನು ಹೊಸ ಶಾಲೆಗಳೆಂದು ಪರಿಗಣಿಸತಕ್ಕದ್ದು; ಈ ಹಿಂದೆ |
| (ಆ) | ಆರ್ಥಿಕ ಇಲಾಖೆಯ ವಿಶೇಷ ಪ್ರಕರಣ ಎಂದು ಪರಿಗಣಿಸಿ ಅನುಮತಿಯನ್ನು ನೀಡಲಾಗಿದ್ದರೂ, ಈ ಬಗ್ಗೆ ಮೀನಮೇಷ ಮಾಡುತ್ತಿರುವುದು ಸರಿಯೇ; | |
| (ಇ) | ಆಡಳಿತ ಮಂಡಳಿಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಎಡವಿದೆಯೇ; ಆಡಳಿತ ಮಂಡಳಿಯು ಶಿಕ್ಷಕರಿಗೆ ವೇತನ ಪಾವತಿಸಲು ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | |
| (ಈ) | ಕಾನೂನು ಇಲಾಖೆ ಸ್ಥಳಾಂತರ/ಹಸ್ತಾಂತರ ಗೊಂಡ ಶಾಲೆಗಳಲ್ಲಿ ಹೊಸ ಶಾಲೆ ಎಂದು ಪರಿಗಣಿಸುತ್ತಿರುವುದು ಸರಿಯಲ್ಲವೆಂದು ಕಾನೂನು ಬದ್ಧ ಅಭಿಪ್ರಾಯ ನೀಡಿದ್ದರೂ ಶಿಕ್ಷಣ ಇಲಾಖೆ ಇದನ್ನು ಪರಿಗಣಿಸದಿರಲು ಕಾರಣಗಳೇನು; (ವಿವರ ನೀಡುವುದು) | |

| | | |
|---|---|---|
| | | ನಡೆದಿರುವ ಶೈಕ್ಷಣಿಕ ವರ್ಷವನ್ನು ವೇತನಾನುದಾನದ ಅರ್ಹತೆಗೆ ಪರಿಗಣಿಸತಕ್ಕದ್ದಲ್ಲ ಹಾಗೂ ಸ್ಥಳಾಂತರ-ಹಸ್ತಾಂತರಗೊಂಡ ಶಾಲೆಗಳಿಗೆ ವೇತನಾನುದಾನವನ್ನು ನೀಡತಕ್ಕದ್ದಲ್ಲವೆಂದು ಸ್ಪಷ್ಟಪಡಿಸಲಾಗಿರುತ್ತದೆ.<br><br>ಅದರನ್ವಯ. 118 ಶಾಲಾ-ಕಾಲೇಜುಗಳ ಪಟ್ಟಿಯಲ್ಲಿನ ಸ್ಥಳಾಂತರ -ಹಸ್ತಾಂತರಗೊಂಡ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಿರುವುದಿಲ್ಲ. |
| (ಉ) | ಆರ್ಥಿಕ ಇಲಾಖೆ ಕೂಡಲೇ ಬಾಕಿ ಉಳಿದಿರುವ 7 ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ? | ಸ್ಥಳಾಂತರ-ಹಸ್ತಾಂತರಗೊಂಡ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸದೇ ಇರುವ 7 ಶಾಲೆಗಳಲ್ಲಿ ಗುಲ್ಬರ್ಗಾ ಡಯೋಸಿಸ್ ಎಜುಕೇಷನ್ ಸೊಸೈಟಿ. ಕಲಬುರಗಿ ಇವರ ಅಡಿಯಲ್ಲಿ ನಡೆಯುತ್ತಿರುವ ಸೇಂಟ್ ಜೋಸೆಫ್ ಪ್ರೌಢಶಾಲೆ (ಕನ್ನಡ ಮಾಧ್ಯಮ) ಶಹಾಪೂರ್ ಗೇಟ್. ಹೈದ್ರಾಬಾದ್ ರಸ್ತೆ. ಬೀದರ್ ಜಿಲ್ಲೆ ಈ ಶಾಲೆಯು ಸ್ಥಳಾಂತರವಾಗಿಲ್ಲದಿರುವುದರಿಂದ. ಹಾಗೂ ತಾಂತ್ರಿಕವಾಗಿ ಆಡಳಿತ ಮಂಡಳಿ ಮಾತ್ರ (i.e., the splitting of the diocese) ಬದಲಾವಣೆಯಾಗಿರುವುದರಿಂದ ಈ ಶಾಲೆಯನ್ನು ಮಾತ್ರ ಸಹಾಯಾನುದಾನಕ್ಕೆ ಒಳಪಡಿಸಲು ಅರ್ಹವೆಂದು ಸಚಿವ ಸಂಪುಟವು ತೀರ್ಮಾನಿಸಿದಲ್ಲಿ ಪರಿಗಣಿಸಬಹುದಾಗಿದೆ ಎಂದು ದಿ:10.09.2024ರಂದು ನೀಡಿದ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. |

ಸಂಖ್ಯೆ:ಆಇ 491 ವೆಚ್ಚ-8/2024

(ಸಿದ್ದರಾಮಯ್ಯ)
ಮಾನ್ಯ ಮುಖ್ಯಮಂತ್ರಿ